**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>**

**ಸಿಸಿ ನಂ. 13654/2019 ಚಾಸಾಃ 1 ಪ್ರಾಸಾಃ 1**

ಸಾಕ್ಷಿದಾರರ ಹೆಸರು : ವೈ.ಸಿ.ಹನುಮಯ್ಯ
ತಂದೆಯ ಹೆಸರು : ಲೇಟ್ ಚಿಕ್ಕಣ್ಣ
ವಯಸ್ಸು : 68 ವರ್ಷ
ವೃತ್ತಿ : ನಿವೃತ್ತ ಎ.ಎಸ್.ಐ
ವಾಸ : ಪ್ರಶಾಂತನಗರ, ಬೆಂಗಳೂರು

**<u>ಸಾಕ್ಷಿಯನ್ನು ದಿಃ 28.11.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸಾ.ಸ.ಅ ರವರಿಂದಃ-</u>**

ಚಾಸಾ-2 ರವರು ನನ್ನ ಸಹೊದ್ಯೋಗಿ. ಚಾಸಾ-3 ರವರು ನನ್ನ ಸ್ನೇಹಿತರು. ಆರೋಪಿ ಪ್ರಕಾಶ್ ರವರು ನನಗೆ ಚಾಸಾ-3 ರವರ ಮುಖಾಂತರ ಪರಿಚಯವಾಗಿರುತ್ತಾರೆ. ನಾನು ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದು 2015 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು ನಿವೃತ್ತಿ ಬಾಬ್ತು ಬಂದಿದ್ದ ಹಣದಲ್ಲಿ 15 ಲಕ್ಷ ರೂಗಳನ್ನು ಅಪೆಕ್ಸ್ ಬ್ಯಾಂಕ್ ನಲ್ಲಿ ಎಫ್.ಡಿ. ಇಟ್ಟಿದ್ದೆನು.

2016ರ ಮಾರ್ಚ್ ತಿಂಗಳಲ್ಲಿ ಚಾಸಾ-3 ರವರು ನನ್ನನ್ನು ಕರೆಯಿಸಿ ಆರೋಪಿ ಪ್ರಕಾಶ್ ರವರನ್ನು ಪರಿಚಯ ಮಾಡಿಕೊಟ್ಟರು. ಚಾಸಾ-3 ರವರು ಆರೋಪಿ ಪ್ರಕಾಶ್ ರವರು ಪ್ರಿಂಟಿಂಗ್ ಪ್ರೆಸ್ ನಲ್ಲಿ ಅನುಭವ ಇರುವ ವ್ಯಕ್ತಿಯಾಗಿದ್ದು, ಸದರಿ ಆರೋಪಿ ಮತ್ತು ತಾನು ಸೇರಿ ಲಗ್ಗೆರೆಯಲ್ಲಿ ಹೊಸದಾಗಿ ಪ್ರಿಂಟಿಂಗ್ ಪ್ರೆಸ್ ತೆರೆಯಲು ಉದ್ದೇಶಿಸಿರುವುದಾಗಿ ತಿಳಿಸಿದರು. ಸರ್ಕಾರದ ಶಾಲಾ ಕಾಲೇಜುಗಳಿಂದ ಪ್ರಿಂಟಿಂಗ್ ಮಾಡಲು ಆದೇಶಗಳು ಬರುವುದಾಗಿ ಈ ಮೂಲಕ ಹೆಚ್ಚಿನ ಲಾಭ ಬರಲಿದ್ದು ಆದ್ದರಿಂದ ಹಣ ತೊಡಗಿಸುವಂತೆ ನನಗೆ ಕೇಳಿದರು. ಚಾಸಾ-3 ಮತ್ತು ಆರೋಪಿ ಪ್ರಕಾಶ್ ರವರ ಮಾತುಗಳನ್ನು ನಂಬಿ ನಾನು ಅಪೆಕ್ಸ್ ಬ್ಯಾಂಕ್ ನಲ್ಲಿ ಎಫ್.ಡಿ. ಇಟ್ಟಿದ್ದ 15 ಲಕ್ಷ ರೂಗಳನ್ನು ತೆಗೆದು ಸದರಿ ಹಣವನ್ನು 03 ಚೆಕ್ ಗಳ

ಮುಖಾಂತರ ತಲಾ 5 ಲಕ್ಷಗಳಂತೆ ಆರೋಪಿ ಪ್ರಕಾಶ್ ಮತ್ತು ಚಾಸಾ-3 ರವರಿಗೆ ಕೊಟ್ಟಿರುತ್ತೇನೆ. ಈ ಸಂಬಂಧ ಆರೋಪಿ ಪ್ರಕಾಶ್ ಮತ್ತು ಚಾಸಾ-3 ರವರು ಸೇರಿ ನನಗೆ ಮೂರು ಕರಾರು ಪತ್ರಗಳನ್ನು ಬರೆದುಕೊಟ್ಟಿರುತ್ತಾರೆ. ಸದರಿ ಕರಾರು ಪತ್ರಗಳನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅದನ್ನು ನಿಪಿ-1 ರಿಂದ 3 ಎಂದು ಗುರ್ತಿಸಲಾಯಿತು. ನಾನು ನೀಡಿದ ಸದರಿ ಹಣದ ಭದ್ರತೆಗಾಗಿ ಆರೋಪಿ ಪ್ರಕಾಶ್ ಮತ್ತು ಚಾಸಾ-3 ರವರು ನನಗೆ 06 ಚೆಕ್ ಗಳನ್ನು ನೀಡಿದ್ದರು. ನಾನು ಅಪೆಕ್ಸ್ ಬ್ಯಾಂಕ್ ನಲ್ಲಿ ಎಫ್.ಡಿ. ಇಟ್ಟಿದ್ದ ಬಗ್ಗೆ ತೋರಿಸಲು ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟ್ ಅನ್ನು ಹಾಜರುಪಡಿಸಿರುತ್ತೇನೆ. ಅದನ್ನು ನೋಡಿ ಸಾಕ್ಷಿದಾರರು ಗುರ್ತಿಸಿದ್ದು ಅದನ್ನು ನಿಪಿ-4 ಎಂದು ಗುರ್ತಿಸಲಾಯಿತು.

ನಂತರ ಆರೋಪಿ ಪ್ರಕಾಶ್ ರವರು ನನಗೆ ಲಗ್ಗೆರೆಯಲ್ಲಿ ಪ್ರಿಂಟಿಂಗ್ ಪ್ರೆಸ್ ತೆರೆಯಲು ಬಿಲ್ಡಿಂಗ್ ಬಾಡಿಗೆಗೆ ತೆಗೆದುಕೊಂಡಿರುವುದಾಗಿ ಒಂದು ಬಿಲ್ಡಿಂಗ್ ಅನ್ನು ತೋರಿಸಿದರು. ಸದರಿ ಬಿಲ್ಡಿಂಗ್ ನಲ್ಲಿ ಪ್ರಿಂಟಿಂಗ್ ಮೆಶೀನ್ ಮತ್ತು ಇತರೆ ಮಿಶನರಿ ಸಾಮಾನುಗಳನ್ನು ಹಾಕಿದ್ದರು. ಹಣದ ಕೊರತೆಯಾಗಿದ್ದು ಪುನಃ 2 ಲಕ್ಷ ರೂಗಳನ್ನು ನೀಡುವಂತೆ ಆರೋಪಿ ಪ್ರಕಾಶ್ ಮತ್ತು ಚಾಸಾ-3 ರವರು ಕೇಳಿದರು. ಅವರ ಕೋರಿಕೆಯಂತೆ ನಾನು 2 ಲಕ್ಷ ರೂಗಳನ್ನು ನಗದಾಗಿ ಕೊಟ್ಟಿರುತ್ತೇನೆ. ಆರೋಪಿ ಪ್ರಕಾಶ್ ಮತ್ತು ಚಾಸಾ-3 ರವರು ಸೇರಿ ನನ್ನ ಬಳಿ ಒಟ್ಟು 17 ಲಕ್ಷ ರೂಗಳನ್ನು ತೆಗೆದುಕೊಂಡಿರುತ್ತಾರೆ.

ಮುಂದುವರೆದ ಮುಖ್ಯವಿಚಾರಣೆಗೆ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**